ಅ) ಭದ್ರಾ ಯೋಜನೆಯ ದಾವಣಗೆರೆ ಕವಲುಗಾಲುವೆಗೆ ಸಂಬಂಧಿಸಿದ ಹಿರೇಮೇಗಳಗೆರೆ ಸುತ್ತುಗಳನ್ನು (ಬೈಪಾಸ್) ಕಾಲುವೆಯ ನಿರ್ಮಾಣ ಮತ್ತು ಹರಪನಹಳ್ಳಿ ಕವಲು ಹಂಚುಗಾಲುವೆ (ಬ್ರಾಂಚ್ ಡಿಸ್ಟ್ರಿಬ್ಯೂಟರಿ) ಪುನರ್ ಮಾದರಿ ಕಾರ್ಯಕ್ಕೆ ಮೂಲತಃ ನವೆಂಬರ್ ೧೯೮೨ರಲ್ಲಿ ೪೦ಲಕ್ಷ ರೂ.ಗಳಿಗೆ ಆಡಳಿತ ಅನುಮತಿ ದೊರೆಯಿತು ತರುವಾಯ ಪರಿಷ್ಕರಿಸಿದ ಆಡಳಿತ ಅನುಮತಿಯು (ರಿವೈಸ್ಡ್ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್) ಜುಲೈ ೧೯೮೪ರಲ್ಲಿ ರೂ ೮೬.೫೫ ಲಕ್ಷಕ್ಕೆ ಕೊಡಲ್ಪಟ್ಟಿದೆ. ಟೆಂಡರ್ ಕರೆಯುವುದು ಹಾಗೂ ಕಾರ್ಯವನ್ನು ಟೆಂಡರ್ ಆಧಾರದ ಮೇಲೆ ವಹಿಸಿಕೊಡುವುದೂ ಮುಂತಾದ ಕೆಲವು ಕಾರಣಗಳಿಂದ ಮೂಲತಃ ಸ್ವಲ್ಪ ಕಾಲವಿಳಂಬವಾಗಿ ನಂತರ ಜಮೀನನ್ನು ಮೇಲ್ಕಂಡ ಕೆಲಸಕ್ಕೆ ಪಡೆಯುವಲ್ಲಿಯೂ ಸಹ ವಿಳಂಬವಾಯಿತು. ಕೆಲಸ ಪ್ರಾರಂಭವಾಗಿದೆ. ೮೭–೮೮ರಲ್ಲಿ ಮುಗಿಸಲು ಉದ್ದೇಶಿಸಲಾಗಿದೆ.

ಆ) ಇಲ್ಲ. ಈ ಯೋಜನೆಗೆ ಮಂಜೂರಾದ ಹಣವನ್ನು ಕಮ್ಮಿ ಮಾಡಿ ಇತರೆ ಯೋಜನೆಗಳಿಗೆ ಜಾಸ್ತಿ ಹಣ ಕೊಟ್ಟಿಲ್ಲ.

ಬಸಾಪುರ ನೀರಾವರಿ ಯೋಜನೆ

೬೯೪ (೧೪೩೩) ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾನಗಲ್ ತಾಲ್ಲೂಕಿನಲ್ಲಿ ವರದಾನದಿಯ ನೀರಿನಿಂದ ಬಸಾಪುರ ಹತ್ತಿರ ನೀರಾವರಿ ಯೋಜನೆಯನ್ನು ಕೈಕೊಳ್ಳುವ ಸಲಹೆ ಸರ್ಕಾರದಲ್ಲಿದೆಯೇ ?

ಆ) ಹಾಗಿದ್ದಲ್ಲಿ, ಅದನ್ನು ಯಾವಾಗ ಕೈಕೊಳ್ಳಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯ ಪೂರ್ವಭಾವಿ ಅನ್ವೇಷಣೆ ನಡೆದಿದೆ:

ಆ) ಯೋಜನೆಯ ತಾಂತ್ರಿಕ ಮತ್ತು ಆರ್ಥಿಕ ಸೂಕ್ತತೆಯನ್ನವಲಂಬಿಸಿದೆ.

ಹಾನಗಲ್ ತಾಲ್ಲೂಕಿನ ಧರ್ಮಯೋಜನೆಗೆ ವಿಶ್ವಬ್ಯಾಂಕಿನ ನೆರವಿನಿಂದ ನವೀಕರಣ ಮಾಡುವುದು

೬೯೫ (೧೪೩೭) ಶ್ರೀ ಸಿ.ಎಂ. ಉದಾಸಿ (ಹಾನಗಲ್).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಹಾನಗಲ್ ತಾಲ್ಲೂಕಿನ ಧರ್ಮಾ ಯೋಜನೆಗೆ ವಿಶ್ವ ಬ್ಯಾಂಕಿನ ನೆರವಿನಿಂದ ನವೀಕರಣ ಮಾಡುವ ಸಲಹೆ ಸರ್ಕಾರದವರಲ್ಲಿದೆಯೇ ?

ಆ) ಹಾಗಿದ್ದಲ್ಲಿ ಅದರ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಧರ್ಮ ಯೋಜನೆಯ ಕಾಲುವೆಗಳನ್ನು ನವೀಕರಣ ಮಾಡುವ ಪ್ರಸ್ತಾವನೆಯು ವಿಶ್ವ ಬ್ಯಾಂಕ್ ನೆರವಿಗಾಗಿ ಸೂಚಿಸಲು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ವಿಶ್ವ ಬ್ಯಾಂಕ್ ನೆರವು ದೊರೆತ ನಂತರವೇ ಕಾಮಗಾರಿಯನ್ನು ಪ್ರಾರಂಭಿಸಬಹುದು.

ತಾಳಿಯ ಭಾಗ್ಯ ಸೀರೆ· ಧೋತಿ ನೀಡುವ ಕುರಿತಂ

೬೯೬ (೭೮೧) ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ತಾಳಿಯ ಭಾಗ್ಯ, ಸೀರೆ, ಕುಪ್ಪಸ, ಧೋತಿ ಯೋಜನೆಯ ಫಲಾನುಭವಿಗಳು ಯಾರು ?

ಆ) ಯಾವ ಆಧಾರದ ಮೇರೆಗೆ ಫಲಾನುಭವಿಗಳನ್ನು ಗುರುತಿಸಲಾಗುವುದು ?

ಇ) ಈ ಯೋಜನೆಯಲ್ಲಿ ಪರಿಶಿಷ್ಟ ವರ್ಗದವರಿಗೆ ಏನಾದರೂ ರಿಯಾಯಿತಿ ನೀಡಲಾಗುವುದೇ?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ತಾಳಿಯ ಭಾಗ್ಯ ಯೋಜನೆಯ ಪ್ರಕಾರ ಪದ್ಧ ವರರು ಸಾಮೂಹಿಕ ವಿವಾಹದಲ್ಲಿ ಪಾಳ್ಗೊಳ್ಳುವವರಾಗಿದ್ದು ಇವರಲ್ಲಿ ಯಾರಾದರೂ ಒಬ್ಬರು ರಿಯಾಯಿತಿ ಆಕ್ಕಿ ಯೋಜನೆಯ ಹಸಿರು ಚೀಟಿ ಪಡೆದ ಕುಟುಂಬದವರಾಗಿರಬೇಕು.

ಆ) ವಧುವರರ ಪೈಕಿ ಯಾರಾದರೂ ಒಬ್ಬರು ರಿಯಾಯಿತಿ ಆಕ್ಕಿ ಯೋಜನೆಯ ಹಸಿರು ಚೀಟಿ ಹೊಂದಿರುವ ಕುಟುಂಬದವರಾಗಿರಬೇಕು.

ಇ) ಇಲ್ಲ.

ರಾಜ್ಯದಲ್ಲಿ ೩ ವರ್ಷದಿಂದ ನಡೆಯಂತ್ತಿರುವ ವರದಕ್ಷಿಣೆ ಪ್ರಕರಣದ ಕುರಿತು

೬೨೭(೧೪೮) ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ರಾಜ್ಯದಲ್ಲಿ ೩ ವರ್ಷಗಳಿಂದ ಬೆಳಕಿಗೆ ಬಂದ ವರದಕ್ಷಿಣೆ ಪ್ರಕರಣಗಳ ಸಂಖ್ಯೆ ಎಷ್ಟು ?

(ಆ) ಈ ಪ್ರಕರಣಗಳ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

(ಅ) ೧೩೭ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ.

(ಆ) ಈ ೧೩೭ ಪ್ರಕರಣಗಳಲ್ಲಿ ಕಾನೂನಿನ ಪ್ರಕಾರ ಫಿರ್ಯಾದು ಮಾಡಲು ಆದೇಶ ಕೊಟ್ಟಿದೆ.

ಸೂಳ್ಯ ಕ್ಷೇತ್ರದಲ್ಲಿ ಸೇತುವೆಗಳ ನಿರ್ಮಾಣ ಹಾಗೂ ಡಾಂಬರ್ ಹಾಕಿಂವುದು

೬೨೮ (೯೩೨) ಶ್ರೀ ಕೆ. ಕುಶಾಲ (ಸೂಳ್ಯ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ಸೂಳ್ಯ (ಮೀಸಲು) ಕ್ಷೇತ್ರಕ್ಕೆ ೧೯೮೫-೮೬ ನೇ ಸಾಲಿಗೆ ಎಷ್ಟು ಸೇತುವೆಗಳನ್ನು ಕಟ್ಟಲು ಮಂಜೂರು ಮಾಡಲಾಗಿದೆ. ಮತ್ತು ಎಷ್ಟು ಉದ್ದದ ರಸ್ತೆಗೆ ಡಾಂಬರ್ ಹಾಕಲು ಉದ್ದೇಶಿಸಲಾಗಿದೆ ?

(ಆ) ಸದರಿ ಸೇತುವೆ ನಿರ್ಮಿಸುವ ಹಾಗೂ ರಸ್ತೆಗಳಿಗೆ ಡಾಂಬರು ಹಾಕುವ ಕಾಮಗಾರಿಗಳನ್ನು ಪ್ರಸ್ತುತ ಸಾಲಿನಲ್ಲಿಯೇ ಪೂರ್ತಿಗೊಳಿಸಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧೯೮೫-೮೬ ರ ಆಯವ್ಯಯದಲ್ಲಿ ರಾಜ್ಯ ಹೆದ್ದಾರಿಯ ಮೇಲೆ ಒಂದು ಸೇತುವೆಯ ಹೊಸ ಕೆಲಸ ಸೇರಿದೆ. ಡಾಂಬರು ಕೆಲಸ ಯಾವುದೋ ಹೊಸದಾಗಿ ಸೇರಿಲ್ಲ.

ಆ) ಮೇಲ್ಕಂಡ ಸೇತುವೆಯ ಕೆಲಸವನ್ನು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲು ಆಗುವುದಿಲ್ಲ.

ಸೂಳ್ಯ ತಾಲ್ಲೂಕಿನ ಪಾಯಪ್ಪನ ಹೊಳೆಗೆ ಆರಯೋಡು—ಕೊಡಿಕಾನ ರಸ್ತೆಯಲ್ಲಿ ನಿರ್ಮಿಸಲಾಗುವ ಸೇತುವೆ ಕುರಿತು

೬೨೯(೯೩೩) ಶ್ರೀ ಕೆ. ಕುಶಾಲ (ಸೂಳ್ಯ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—